# ಒಂದು 'ಸಮಾಧಾನ' ವನ





ಇದು ಸರಕಾರದ ನೆರವಿಲ್ಲದ, ಜನರೇ ಒಟ್ಟುಗೂಡಿ ಶ್ರಮದಾನ ಮಾಡಿ ನಿರ್ಮಿಸಿದ ಉದ್ಯಾನವನ!

ಚಿತ್ರ– ಲೇಖನ:
**ವಿ. ಶ್ರೀನಿವಾಸ**

ವಿಶಾಲವಾದ ವನದ ಒಂದು ಭಾಗದಲ್ಲಿ ಬೋಗುಣಿಯಾಕಾರದ ಹಚ್ಚ ಹಸಿರು ಹುಲ್ಲುಹಾಸು, ಸುತ್ತಲೂ ಮರಗಳು, ಇಲ್ಲಿಯ ಪ್ರಶಾಂತ ವಾತಾವರಣ, ಸಮಾಧಾನ ಮೂಡಿಸುತ್ತದೆ ಎಂದುಕೊಂಡರೆ, 'ಅದೇ ಈ ಗಾರ್ಡನ್ ಆಫ್ ಸೋಲೇಸ್ ನ ಉದ್ದೇಶ' ಎನ್ನುತ್ತಾರೆ ಈ ಉದ್ಯಾನವನದ ನಿರ್ಮಾತೃಗಳು.

ಅಮೆರಿಕದ ಒರೆಗಾನ್ ರಾಜ್ಯದ ಮುಖ್ಯ ನಗರಗಳಲ್ಲಿ ಒಂದು ಪೋರ್ಟ್‌ಲ್ಯಾಂಡ್. ಅಮೆರಿಕದ ಅನೇಕ ಕಡೆ ಇರುವಂತೆ ಇಲ್ಲೂ ಒಂದು ವಾಷಿಂಗ್‌ಟನ್ ಪಾರ್ಕ್ ಇದೆ. ವಿಶಾಲವಾದ ಈ ಪಾರ್ಕ್‌ನ ಒಂದು ಭಾಗದಲ್ಲಿ ರೋಸ್ ಗಾರ್ಡನ್ ಇದೆ. ಪ್ರವೇಶದಲ್ಲೇ ವಿಶ್ವ ಅರಣ್ಯ ಮ್ಯೂಸಿಯಂ, ಪಕ್ಕದಲ್ಲೇ ಒರೆಗಾನ್ ಪ್ರಾಣಿ ಸಂಗ್ರಹಾಲಯವಿದೆ. ಸಮೀಪದಲ್ಲೇ ಮಕ್ಕಳ ಮ್ಯೂಸಿಯಂ ಕೈಬೀಸಿ ಕರೆಯುತ್ತದೆ. ಇವೆಲ್ಲವುಗಳ ನಡುವೆ ನಮಗೆ ವಿಶೇಷವೆನಿಸಿದ್ದು, ಗಾರ್ಡನ್ ಆಫ್ ಸೋಲೇಸ್. ಕನ್ನಡದಲ್ಲಿ ಸಾಂತ್ವನ ಅಥವಾ ಸಮಾಧಾನದ ವನ ಎನ್ನಬಹುದೇನೋ.

ಸುಮಾರು 1955ರಿಂದ 1975ರವರೆಗೆ ನಡೆದ ವಿಯೆಟ್ನಾಂ ಯುದ್ಧದಲ್ಲಿ ಭಾಗವಹಿಸಿದ್ದ ಒರೆಗಾನ್ ರಾಜ್ಯದ 57,000 ಯೋಧರ ಗೌರವಾರ್ಥ ಈ ಉದ್ಯಾನವನ್ನವನ್ನು ನಿರ್ಮಿಸಲಾಗಿದೆ. 1982ರಲ್ಲಿ ನಿವೃತ್ತ ಯೋಧರೇ ಒಂದು ಸಮಿತಿ ರಚಿಸಿಕೊಂಡು ತಾವೇ ಸ್ವಲ್ಪ ಹಣ ಹಾಕಿ ಶುರು ಮಾಡಿದ ಈ ಉದ್ಯಾನ